ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಂಥ ನಿದರ್ಶನಗಳನ್ನು ಸರ್ಕಾರದವರ ಗಮನಕ್ಕೆ ತಂದರೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎನ್. ಎ. ಜನ್ನೇಗೌಡ.—ಮೈಸೂರು ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿ ಸೀಟುಗಳನ್ನು ಕೊಡತಕ್ಕ ಕಾಲದಲ್ಲಿ ಅವರಿಗೇನಾದರೂ ತಿಳುವಳಿಕೆಯನ್ನು ಕೊಡಲಾಗಿತ್ತೇ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿ ಆಗ ಉತ್ತರ ಒದಗಿಸಲಾಗುತ್ತದೆ.

Sri G. DUGGAPPA.—May I know whether it has come to the notice of the Government that in post-graduate courses this reservation is not being followed, specially for scheduled castes and scheduled tribes candidates ?

Sri N. M. KOTRABASAIAH SOGI.—No such instances have come to the notice of the Government. If any such instance is brought to the notice of the Government, necessary action will be taken.

Unemployed Engineers

235. Sri S. M. GUREDDI (Muddebihal).—

Will the Minister for Public Works be pleased to state :—

(*a*) the number of Engineers in the State who are unemployed ;

(*b*) the steps taken by them to provide jobs to the unemployed engineers ?

A.—Sri K. LAKKAPPA (Minister for Public Works).—

(*a*) 3,000 approximately (about 500 Graduates and 2,500 Diploma Holders).

(*b*) Certain concessions to unemployed engineers who take up contracts under Government are being extended.

2. Under the Government of India stipendiary scheme 45 Graduates and 25 Diploma Hollers have been allotted to State Government for training in several Projects. A stipend of Rs. 250 p.m. for each Graduate and Rs. 150 p.m. for each Diploma Holder is paid by the Government of India. The Government of India have been requested to increase the number of stipends.

3. A number of unemployed engineers are engaged on daily wages on work-charged establishment in the Public Works Department.

ಶ್ರೀ ಎಸ್. ಎಂ. ಗುರೆಡ್ಡಿ.—ತಾವು ಹೇಳಿದ ಪ್ರಕಾರ ಭಾರತ ಸರ್ಕಾರದವರು ಈಗಾಗಲೇ 45 ಮಂದಿ ಪದವೀಧರರಿಗೆ ಮತ್ತು 25 ಡಿಪ್ಲೊಮಾ ಹೋಲ್ಡರ್ಸ್‌ಗೆ ಏನು ತರಬೇತಿ ಕೊಡುವ ಸಲುವಾಗಿ ತಗೆದುಕೊಂಡಿದ್ದಾರೆ, ಅವರನ್ನು ಅಲ್ಲಿ ಪರ್ಮನೆಂಟಾಗಿ ಸೇರಿಸಿಕೊಳ್ಳುವಂತೆ ಕೇಳುತ್ತಿದ್ದೀರಾ ?

ಶ್ರೀ ಕೆ. ಲಕ್ಕಪ್ಪ.—ಕೇಂದ್ರ ಸರ್ಕಾರದವರು ಅಪ್ರೆಂಟಿನ್‌ಷಿಪ್ ಸ್ಕೀಂ ಮಾಡಿಕೊಂಡು ಆ ಪ್ರಕಾರ ಗ್ರಾಜ್ಯುಯೇಟ್ಸ್ ಮತ್ತು ಡಿಪ್ಲೊಮಾ ಹೋಲ್ಡರ್ಸ್‌ಗೆ ಇಂಟರ್‌ಪ್ಯೂಗೆ ಕರೆದು, ಸೆಲೆಕ್ಟ್ ಮಾಡಿ ಅವರನ್ನು ಇರಿಗೇಶನ್ ಪ್ರೊಜೆಕ್ಟನ ಅನುಭವ ಪಡೆಯುವುದಕ್ಕೋಸ್ಕರ ಕಳಿಸಿಕೊಡುತ್ತಿದ್ದಾರೆ. ಪ್ರಾಯಶಃ ಇದನ್ನು ತಾತ್ಕಾಲಿಕವಾಗಿ ಮಾಡಿದ್ದಾರೆ. ಟ್ರೈನಿಂಗ್ ಆದಮೇಲೆ ಪುನಃ ನೇಮಕ ಮಾಡಿಕೊಳ್ಳುತ್ತಾರೆ.

ಶ್ರೀ ಎಸ್. ಎಂ. ಗುರೆಡ್ಡಿ.—ಈಗಾಗಲೆ ರೋಕೋಪಯೋಗಿ ಖಾತೆಯಲ್ಲಿ ಕೆಲವು ಜನರನ್ನು ದಿನಕೂಲಿಯಾಗಿ ತೆಗೆದುಕೊಂಡಿದ್ದಾರೆ. ಹಾಗೆ ತೆಗೆದುಕೊಂಡವರನ್ನು ಖಾಯಂ ಮಾಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಖಾಯಂ ಮಾಡಿಯೇ ಮಾಡುತ್ತೇವೆಂದು ಗ್ಯಾರಂಟಿ ಕೊಡುವುದಿಲ್ಲ. ಎಷ್ಟುಮಟ್ಟಿಗೆ ಸಾಧ್ಯವಾಗುತ್ತದೆ, ಅಷ್ಟು ಅಬ್ಸಾರ್ಬ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

Sri J. P. SARWESH.—Will the State Government write to other Governments in the country to find out whether there are any chances there for these Engineers and try to provide employment for them in those States ?

ಶ್ರೀ ಕೆ. ಲಕ್ಕಪ್ಪ.—ಇಲ್ಲ, ನಾವು ಬೇರೆ ಸರ್ಕಾರದೊಡನೆ ಪತ್ರ ವ್ಯವಹಾರ ನಡೆಸಿಲ್ಲ. ಯಾರು ಕೆಲಸ ಬೇಕು, ಯಾರು ಪ್ರಯತ್ನ ಮಾಡುತ್ತಾರೆ ಅವರಿಗೆ ಕೆಲಸವನ್ನು ದೇಶದಲ್ಲಿ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಪ್ರಾಯಶಃ ಎಲ್ಲರಿಗೂ ಕೆಲಸ ಕೊಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಬಾಪುಗೌಡ.—ಮೈಸೂರು ದೇಶದಲ್ಲಿ ಸ್ಟೇಟ್ ಕನ್‌ಸ್ಟ್ರಕ್ಷನ್ ಕಾರ್ಪೊರೇಶನ್ ಮಾಡಿದ್ದಾರೆ ಅಲ್ಲಿ ನಿರುದ್ಯೋಗ ಇಂಜಿನಿಯರುಗಳಿಗೆ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಈ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ಅಲ್ಲೂ ಕೆಲವರನ್ನು ತೆಗೆದುಕೊಳ್ಳುತ್ತಾರೆ. ಯಾರಾದರೂ 5 ಲಕ್ಷಕ್ಕೆ ಹೆಚ್ಚಾಗಿ ಕೆಲಸ ಮಾಡುವುದಿದ್ದರೆ, ಅಂಥ ಕಂಟ್ರಾಕ್ಟರುಗಳಿಗೆ ಜೂನಿಯರು ಇಂಜಿನಿಯರುಗಳನ್ನು ಕಡ್ಡಾಯವಾಗಿ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇವೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಇಲ್ಲಿ ಎಷ್ಟು ಜನ ಇಂಜಿನಿಯರ್ ಗ್ರಾಜ್ಯುಯೇಟ್ಸ್ ಅನೆಂಪ್ಲಾಯಿಡ್ ಆಗಿದ್ದಾರೆಂದು ಕೇಳಿದ್ದಕ್ಕೆ ಮಾನ್ಯ ಮಂತ್ರಿಯವರು ಸಿವಿಲ್ ಇಂಜಿನಿಯರ್ ಬಗ್ಗೆ ಮಾತ್ರ ಹೇಳುತ್ತಿದ್ದಾರೆ. ಈಗ ಸಿವಿಲ್, ಎರೆಕ್ಟಿಕರ್ ಮತ್ತು ಮೆಕ್ಯಾನಿಕರ್ ಇಂಜಿನಿಯರುಗಳು ಎಷ್ಟು ನಿರುದ್ಯೋಗಿಗಳಾಗಿದ್ದಾರೆ ?

ಶ್ರೀ ಕೆ. ಲಕ್ಕಪ್ಪ.—ಎಲ್ಲರನ್ನೂ ಸೇರಿಸಿ ಹೇಳುತ್ತಿದ್ದೇನೆ. ಸುಮಾರು 500 ಮಂದಿ ಇದ್ದಾರೆ. ಯಾರು ಅರ್ಜಿ ಹಾಕಿದ್ದಾರೆ, ಅದರಮೇಲೆ ಹೇಳುತ್ತಿದ್ದೇನೆ. ಅದರಲ್ಲಿ ಎಂಟ್ರಾ ಜನರೂ ಸೇರಿದ್ದಾರೆ

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಬಹಳ ಜನ ಪದವೀಧರರು ಮತ್ತು ಡಿಪ್ಲೊಮಾ ಹೋಲ್ಡರ್ಸ್ ಕೆಲಸವಿಲ್ಲದಿರತಕ್ಕಂತದ್ದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಕೆಲಸವಿಲ್ಲದೆ ಹಲವರು ಮಹಾರಾಷ್ಟ್ರಕ್ಕೆ ಹೋಗಿದ್ದಾರೆ. ಅಲ್ಲಿ ಅವರಿಗೆ ಮಹಾರಾಷ್ಟ್ರದವರು ತೊಂದರೆ ಕೊಡುತ್ತಿದ್ದಾರೆ. ಅಂಥ ಜನರಿಗೆ ನಮ್ಮ ಮೈಸೂರಲ್ಲಿ ಕೆಲಸ ಕೊಡುವುದಕ್ಕೆ ಅವಕಾಶ ಇದೆಯೆ ?

ಶ್ರೀ ಕೆ. ಲಕ್ಕಪ್ಪ.—ತೊಂದರೆ ಕೊಡುತ್ತಾರೆಂಬುದು ನಮ್ಮ ಗಮನಕ್ಕೆ ಬಂದಿಲ್ಲ. ಅವರು ಪುನಃ ವಾಪಸ್ಸು ಬಂದರೆ, ಕೆಲಸ ಇದ್ದರೆ, ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಈಗ ತಾವು ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ ಏನು ಮಾಡಿದ್ದೀರಿ, ಅದರಲ್ಲಿ ನಿರುದ್ಯೋಗ ಇಂಜಿನಿಯರುಗಳಿಗೆ ಇಂತಿಷ್ಟು ಷೇರ್ ಎಂದು ನಿಗದಿ ಮಾಡಿ ಬಂಡವಾಳ ಹಾಕುವಂತೆ ಮಾಡಿದರೆ, ಅದರಲ್ಲಿ ಅವರು ಹೆಚ್ಚಿನ ಆಸಕ್ತಿ ವಹಿಸುವ ಹಾಗೂ ಆಗುತ್ತದೆ, ಮತ್ತು ಆರ್ಥಿಕವಾಗಿಯೂ ಕಾರ್ಪೊರೇಷನ್ನನ್ನು ಬಲಪಡಿಸಿದ ಹಾಗೆ ಆಗುತ್ತದೆ. ಮತ್ತು ಉದ್ಯೋಗ ಒದಗಿಸಿದ ಹಾಗೂ ಆಗುತ್ತದೆ. ಇವುಗಳನ್ನು ಆರೋಚನೆ ಮಾಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್‌ನಲ್ಲಿ ಈ ರೀತಿ ಬೇರೆಯವರ ಹಣ ಹಾಕುವುದಕ್ಕೆ ವ್ಯವಸ್ಥೆ ಇಲ್ಲ. ಅವರು ಸೊಸೈಟಿ ಮಾಡಿಕೊಳ್ಳಬಹುದು. ಅದರಲ್ಲಿ ಷೇರ್ ಹಾಕಿಕೊಳ್ಳಬಹುದು, ಈ ಮೂಲಕ ಅವರು ಪ್ರಾರಂಭ ಮಾಡಬಹುದು.

12-30 P.M.

ಶ್ರೀ ಸಿದ್ದಯ್ಯ ಕಾಶೀಮಠ್.—ಬರಗಾಲ ಕಾಮಗಾರಿಗಳು ರಾಜ್ಯದ ತುಂಬ ನಡೆಯುತ್ತಿರುವಾಗ, ಇದ್ದಂಥ ಇಂಜಿನಿಯರುಗಳಿಗೆ ಕೆಲಸ ಬಹಳಷ್ಟಾಗಿರುವುದರಿಂದ ಅಲ್ಲಗೆ ನಿರುದ್ಯೋಗಿಗಳಾದ ಇಂಜಿನಿಯರುಗಳನ್ನು ನೇಮಿಸುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಈಗಿರುವ ಇಂಜಿನಿಯರುಗಳಿಗೆ ಸಾಕಷ್ಟು ಕೆಲಸಗಳು ಇಲ್ಲ. ಈಗಿರತಕ್ಕ ಕೆಲಸವನ್ನು ಇರುವವರೇ ಮಾಡುತ್ತಾರೆ. ಕೆಲವು ಸನ್ನಿವೇಶದಲ್ಲಿ ಈಗ ನಿರುದ್ಯೋಗ ಇರುವ ಸಂದರ್ಭದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಅವರನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಾಗಲಿ ಎಂದು ಅನೇಕ ಕಡೆಗಳಲ್ಲಿ ಪಿ.ಡಬ್ಲ್ಯು.ಡಿ. ರಸ್ತೆ ಕಾಮಗಾರಿಗಳನ್ನು ಇರಾಖೆಯು ಮೂಲಕ ಮಾಡುವುದಾದರೆ ಇದು ಸ್ವಲ್ಪ ಮಟ್ಟಿಗೆ ಸಾರ್ವ್ ಆಗಬಹುದೆಂದ ಮಾಡುತ್ತಿದ್ದಾರೆ.

Sri R. NAGAN GOUDA.—In the last three plan periods we have developed large scale industries and not small scale industries on the lines on which Japan has been doing and has been employing lots of Engineers and people with engineering skill. May I know whether Government is willing to send some experts to Japan and find out how those small scale industries that are being developed there can be followed here in this country? If there is an industry like cycle industry there are lots of ancillary industries to it and similarly if there is an aircraft industry there are lots of ancillary industries to it. These are the things that we should suggest to our Engineers.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಸದಸ್ಯರು ಈ ಬಗ್ಗೆ ಸ್ವಲ್ಪ ಹೆಚ್ಚಿನ ವಿವರಗಳನ್ನು ಒದಗಿಸಿಕೊಟ್ಟರೆ ಅವನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಾರೆ.

Sri D. B. KALMANKAR.—May I know whether any apprentice scheme was mooted by the Chief Minister of this State, who had assured all unemployed engineers and diploma-holders a sum of Rs. 250 and Rs. 150 respectively and they would be engaged usefully?

ಶ್ರೀ ಕೆ. ಲಕ್ಕಪ್ಪ.—ಹಾಗೆಯೇ ಮಾಡುತ್ತಿದ್ದೇವೆ. ಪದವೀಧರನಿಗೆ 250 ರೂಪಾಯಿಗಳನ್ನೂ, ಡಿಪ್ಲೋಮಾದಾರನಿಗೆ 150 ರೂಪಾಯಿಗಳನ್ನೂ ಮಾಹೆಯಾನ ಕೊಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್.—ಕಂಟ್ರಾಕ್ಟ್‌ಗಳನ್ನು ಕೈಗೊಳ್ಳುವ ನಿರುದ್ಯೋಗಿ ಇಂಜಿನಿಯರುಗಳಿಗೆ ಕೆಲವು ರಿಯಾಯಿತಿಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಅವು ಯಾವುವು?

ಶ್ರೀ ಕೆ. ಲಕ್ಕಪ್ಪ.—ಹೊಸದಾಗಿ ಕಂಟ್ರಾಕ್ಟ್ ಮಾಡುತ್ತೇವೆಂದು ಬಂದರೆ, ಬರಲಿ. ಅವರು ಕಂಟ್ರಾಕ್ಟರ್ ಆಗಬೇಕಾದರೆ ಅವರಿಗೆ ರಿಜಿಸ್ಟ್ರೇಷನ್ ಫೀ ಎಂದು ಇರುತ್ತದೆ. ಅದನ್ನು ಮನ್ನಾ ಮಾಡಿದ್ದೇವೆ. ಟ್ರೈನಿಂಗ್ ಅನುಭವ ಬೇಕೆಂದು ಕೇಳಿದ್ದೇವೆ. ಅನುಭವವೂ ಬೇಕಿಲ್ಲ ಡಿಪ್ಲೋಮಾ ಹೋಲ್ಡರ್ಸ್‌ಗೂ ಸಹ ಬೇಕಿಲ್ಲ. ಜೊತೆಗೆ ಕಂಟ್ರಾಕ್ಟರ್ ಆದಮೇಲೆ ಶೇಕಡ ಎರಡೂವರೆಯಷ್ಟು ಅರ್ನೆಸ್ಟ್ ಮನಿ ಡಿಪಾಜಿಟ್ ಇಡಬೇಕಾಗಿದೆ, ಮುಂದೆ ಸೆಕ್ಯೂರಿಟಿ ಡಿಪಾಜಿಟ್ ಸಹ ಕೊಡಬೇಕಾಗಿದೆಂಬುದಾಗಿ ಇದೆ. ಅದನ್ನೂ ಅವರು ಕೊಡಬೇಕಾಗಿಲ್ಲ. ಅವರು ಕೆಲಸ ಮಾಡಿ ಬಿಲ್‌ಗಳು ಬಂದಾಗ್ಗೆ ಶೇಕಡ 10 ರಷ್ಟು ರಿಯಾಯಿತಿ ಕೊಟ್ಟಿದ್ದೇವೆ. ಜೊತೆಗೆ ಟೆಂಡರ್ ಅರ್ಜಿಗಳನ್ನು ಹಾಕಿಕೊಳ್ಳುವಾಗ, ಷೆಡ್ಯೂಲ್ಡ್ ರೇಟಿನಲ್ಲಿ ಶೇಕಡ 8 ಕ್ಕಿಂತ ಜಾಸ್ತಿ ಇದ್ದರೆ ಅದನ್ನು ಕಂಟ್ರಾಕ್ಟರ್ ಕ್ವೋಟಿಟ್ಸ್ ಅವರಿಗೆ ಕೊಡಬೇಕೆಂಬುದಾಗಿ ನಿಯಮ ಮಾಡಿಕೊಂಡಿದ್ದೇವೆ.

ಶ್ರೀ ಕೆ. ನಂಗನಗೌಡ.—ಎಷ್ಟು ಜನ ಇಂಜಿನಿಯರುಗಳು ಆ ರೀತಿ ತಮ್ಮ ಮುಂದೆ ಬಂದಿದ್ದಾರೆ?

ಶ್ರೀ ಕೆ. ಲಕ್ಕಪ್ಪ.—ಕೆಲಸ ಬೇಕೆಂದು ಅರ್ಜಿಗಳು ಬರುತ್ತಾ ಇವೆ. ಆ ರಿಯಾಯಿತಿಗಳನ್ನು ಕೊಡಿ ಎಂದು ಅರ್ಜಿಗಳು ಬಂದಿಲ್ಲ. ಕಂಟ್ರಾಕ್ಟ್ ಮಾಡುತ್ತೇವೆ ಎಂಬುದಾಗಿ ಮುಂದೆ ಬಂದವರಿಗೆ ರಿಯಾಯಿತಿ ತೋರಿಸುತ್ತೇವೆಂದು ಹೇಳುತ್ತೇವೆ. ಆದರೆ ಕಂಟ್ರಾಕ್ಟರ್ ಆಗಿ ಬರುತ್ತೇವೆಂದು ಯಾರೂ ಮುಂದೆ ಬಂದಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಒಂದು ವರ್ಷಕ್ಕೆ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಸುಮಾರು ಎರಡುಸಾವಿರ ಜನರು ಡಿಪ್ಲೊಮಾ ಪಾಸ್ ಮಾಡುತ್ತಾರೆ. ಕಳೆದ 5 ವರ್ಷಗಳ ಹಿಂದಿನ ರೆಕ್ಕಡ ಪ್ರಕಾರ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ಇದುವರೆಗೆ ಸುಮಾರು 10 ಸಾವಿರ ಜನರು ಡಿಪ್ಲೊಮಾ ಹೋಲ್ಡರ್ಸ್ ಕೆಲಸವಿಲ್ಲದೆ ಇದ್ದಾರೆಂದು ತಿಳಿದುಬಂದಿದೆ. ಅಂದಮೇಲೆ ಈ ಸಂಖ್ಯೆ ಕರಾರುವಾಕ್ಕಾಗಿ ಇದೆಯೆಂದು ಹೇಳುತ್ತೀರಾ?

ಶ್ರೀ ಕೆ. ಲಕ್ಕಪ್ಪ.—ಅಷ್ಟು ಜನ ಪಾಸಾಗಿರಬಹುದು. ಆದರೆ ಅನೇಕ ಜನ ಸರ್ಕಾರಿ ಉದ್ಯೋಗ ಬೇಕು ಎಂದು ಮುಂದೆ ಬಾರದೆ ಇರಬಹುದು. ಬೇರೆ ಬೇರೆ ಕೆಲಸಗಳಿಗೆ ಹೋಗಿ ಸೇರಿಕೊಂಡಿರಬಹುದು. ನಮಗೆ ಕೆಲಸಬೇಕೆಂದು ಯಾರು ಸರ್ಕಾರಕ್ಕೆ ಅರ್ಜಿಯನ್ನು ಹಾಕಿಕೊಂಡಿದ್ದಾರೆಯೋ ಅದರ ಆಧಾರದಮೇಲೆ ನಾನು ಇದನ್ನು ಹೇಳಿದ್ದೇನೆ. ಇನ್ನೂ ಜಾಸ್ತಿ ಇರಬಹುದು.

Reinstatement of Conductors by M.S.R.T.C.

236. Sri SIDDAIAH KASHIMATH (Shirahatti).—

Will the Minister for Transport be pleased to state: —

(*a*) the number of bus conductors dismissed so far by M.S.R.T.C. Corporation (Divisionwise figures may be furnished);

(*b*) the number of them reinstated (Divisionwise figures may be furnished);

(*c*) whether there are any Writ Petitions pending in High Court in this connection ?

A.—Sri MOHAMED ALI (Minister for Transport).—

(*a*) 946.

Divisionwise break up is as follows :—

(1) B.T.S. Division	...	86
(2) Bangalore Division	...	48
(3) Hubli Division	...	182
(4) Bellary Division	...	92
(5) Belgaum Division	...	118
(6) Mysore Division	...	51
(7) Bijapur Division	...	57
(8) Gulbarga Division	...	139
(9) North Kanara Division	...	16
(10) Hassan Division	...	157

(*b*) 30.

Divisionwise break up is as follows :—

(1) B.T.S. Division	...	6
(2) Bangalore Division	...	2
(3) Hubli Division	...	5
(4) Bellary Division	...	1
(5) Belgaum Division	...	6
(6) Mysore Division	...	3
(7) Bijapur Division	...	3
(8) Gulbarga Division	...	4
(9) N. K. Division	...	Nil
(10) Hassan Division	...	Nil

(*c*) Yes, 20 Writ Petitions are pending.